ID.2/2023 PW-1

ದಿಃ 19-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಕೆ. ವಕೀಲರಿಂದ ಎದುರುದಾರರ ಪರವಾಗಿಃ**

ನಾನು SSLC ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಈ ಪ್ರಕರಣವನ್ನು ದಾಖಲಿಸಲು ಮಾಹಿತಿಯನ್ನು ಯಾರು ಕೊಟ್ಟಿಲ್ಲ. ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಈಗ ನನಗೆ ತೋರಿಸಿದ ನಿಪಿ-1 lawyer ಗೆ 2019 ರಲ್ಲಿ ಕೊಟ್ಟಿದ್ದು. ಅದರಲ್ಲಿ ಬರೆದ ಮಾಹಿತಿ ನನಗೆ ಗೊತ್ತಿರುತ್ತದೆ. ಆ ದಾಖಲೆಯನ್ನು ನಾನು ಅರ್ಜಿಯಲ್ಲಿ ಹೇಳಿ ಬರೆಸಿಲ್ಲ.

ದಿಃ 11-11-2008 ರಂದು ನಾನು ಎದುರುದಾರರ Firm ಗೆ ಸೇರಿಕೊಂಡಿರುತ್ತೇನೆ. ಎದುರುದಾರರು ಈ ಪ್ರಕರಣಕ್ಕೆ ಹಾಕಿರುವಂತಹ ತಕರಾರಿನ ಬಗ್ಗೆ ಮಾಹಿತಿ ಇದೆ. ಎದುರುದಾರರು ತಮ್ಮ ತಕರಾರಿನಲ್ಲಿ ನಾನು ಕೆಲಸಕ್ಕೆ ಮಾರ್ಚ 2008 ಅಂತ ಇರುತ್ತದೆ. ಸಾಕ್ಷಿದಾರರು ಹೇಳುತ್ತಾರೆ ನಾನು ಎದುರುದಾರರು Firm ಗೆ ಸೇರಿದ್ದು 2008 ಆದರೆ Account ಮಾರ್ಚ 2009 ರಿಂದ maintain ಮಾಡಲಾಗಿದೆ. ಮೊದಲಿಗೆ ನನ್ನ ಸಂಬಳ ₹2,400/- ಇತ್ತು. ಅದೇ Department ನಲ್ಲಿ ನಾನು ಸೇರಿದಾಗಿನಿಂದ Attender ಅಂತ 2019 ರವರೆಗೆ ಕೆಲಸ ಮಾಡಿದ್ದೇನೆ. 2009 ರಲ್ಲಿ ನಾನು ಕೆಲಸಕ್ಕೆ Attender ಆಗಿ ಸೇರಿದ್ದು, ನಂತರ ಜೂನ್ 2019 ರಲ್ಲಿ ನನ್ನನ್ನು BOPP Department ಗೆ Helper ಆಗಿ ಕಳುಹಿಸಿದರು ಅಂದರೆ ನಿಜ. Helper ಆಗಿ ಜೂನ್ 2019 ರಲ್ಲಿ ನನ್ನ ಸಂಬಳ ₹10,886/- ಇರುತ್ತದೆ ಅಂದರೆ ಸರಿಯಲ್ಲ. ನನಗೆ ಸಂಬಳ ₹6,900/- ಎಂಬುವುದಾಗಿ ಎದುರುದಾರರು ಕೊಡುತ್ತಿದ್ದರು. ನನ್ನ ಸಂಬಳ ₹6,900/- ಎಂಬುವುದಾಗಿ ಕೊಡುತ್ತಿದ್ದ ಬಗ್ಗೆ ದಾಖಲೆ ಏನು ಇಲ್ಲ. ಸಾಕ್ಷಿದಾರರು ಹೇಳುತ್ತಾರೆ ಅಲಹಬಾದ್ Bank Statement ದಾಖಲೆ ಇರುತ್ತದೆ. ನಾನು ಕೆಲಸಕ್ಕೆ ಸೇರಿದಾಗ ESI and PF ಇತ್ತು.

ಪ್ರತಿವಾದಿಯ Firm ನಲ್ಲಿ ಕೆಲಸ ಮಾಡುತ್ತಿರುವಾಗ ರವಿವಾರ ಮಾತ್ರ ನನಗೆ ರಜೆ ಇತ್ತು. ಅಂದರೆ ತಿಂಗಳಿಗೆ 4 ಭಾನುವಾರ ಅಥವಾ 5 ಭಾನುವಾರ ಬಂದರೆ ರಜೆ ಇರುತ್ತದೆ. ನನಗೆ 26 ದಿವಸದ ಕೆಲಸಕ್ಕೆ ಲೆಕ್ಕ ಹಾಕಿ ಸಂಬಳ ಕೊಡುತ್ತಿದ್ದರು ಅಂದರೆ ನಿಜ.

ದಿಃ 04-12-2024 ರಂದು ನಾನು ನೀಡಿದ ಸಾಕ್ಷಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ಆ ಪ್ರಮಾಣ ಪತ್ರವನ್ನು ಕೊಡುವ ಕಾಲಕ್ಕೆ ನಾನು ಯಾವುದೇ ದಾಖಲೆ ಇಟ್ಟುಕೊಂಡಿರಲಿಲ್ಲ. ದಿಃ 21-10-2019 ರಂದು ನಡೆದ ಘಟನೆಯ ಬಗ್ಗೆ ನನಗೆ ಮಾಹಿತಿ ಇದೆ. ದಿಃ 21-10-2019 ರಂದು ನಾನು Helper ಆಗಿ ಕೆಲಸ ಮಾಡುತ್ತಿರುವಾಗ ಸಿಲೆಂಡರ್ ಬಾಗನಾರಾಯಣರವರ ಕಾಲಿನ ಹತ್ತಿರ ಬಿತ್ತು, ಅವರ ಕಾಲಿನ ಮೇಲೆ ಬಿದ್ದಿಲ್ಲ. ಬಾಗನಾರಾಯಣರವರ ಬೆರಳಿಗೆ ಗಾಯ ಆಗಿ ಅವರಿಗೆ ಚಿಕಿತ್ಸೆ ಕೊಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ದಿಃ 21-10-2019 ರಂದು ನನ್ನ ನಿರ್ಲಕ್ಷ್ಯತನದಿಂದ ಬಾಗನಾರಾಯಣರವರ ಕಾಲಿನ ಮೇಲೆ ಸಿಲಿಂಡರ್ ಬಿದ್ದಿರುತ್ತದೆ ಅಂದರೆ ಸರಿಯಲ್ಲ. ಆ ತಾರೀಖಿನ ಪೂರ್ವದಲ್ಲಿ ಸಹ ಈ ರೀತಿ 02-03 ಘಟನೆಗಳು ಆಗಿವೆ ಅಂದರೆ ಸರಿಯಲ್ಲ.

ಪ್ರಶ್ನೆಃ ಮಾಲೀಕರು ನಿಮಗೆ ವಿಚಾರಿಸಿದಾಗ ನೀವು ಬೇಜವಬ್ದಾರಿತನದಿಂದ ಉತ್ತರ ನೀಡಿರುತ್ತೀರಾ?

ಉತ್ತರಃ 4 ಜನ Helper ನ ಕೆಲಸವನ್ನು ನನ್ನ ಒಬ್ಬನ ಮೇಲೆ ವಹಿಸಿದ್ದರು.

4 ಜನ Helper ನ ಕೆಲಸವನ್ನು ನನ್ನ ಒಬ್ಬನ ಮೇಲೆ ವಹಿಸಿದ್ದರು ಅಂತ ನಾನು ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿ ಕಾಣಿಸಿಲ್ಲ. ಸಾಕ್ಷಿದಾರರು ಹೇಳುತ್ತಾರೆ ನನಗೆ Torture ಮಾಡುತ್ತಿದ್ದರು. ಸದರಿ ವಿಷಯವನ್ನು ಅಂದರೆ 4 ಜನ Helper ನ ಕೆಲಸವನ್ನು ನನ್ನ ಒಬ್ಬನ ಮೇಲೆ ವಹಿಸಿದ್ದನ್ನು ನನಗೆ ಪ್ರಮಾಣ ಪತ್ರದಲ್ಲಿ ಆಗಲಿ ಅರ್ಜಿಯಲ್ಲಿ ಕಾಣಿಸಲು ತೊಂದರೆ ಏನು ಇರಲಿಲ್ಲ.

ನನಗೆ ಕಣ್ಣಿನ ದೃಷ್ಟಿಯ ದೋಷ ಇರುವುದಿಲ್ಲ. ಮಾಲೀಕರು ಹೇಳಿರುವುದರಿಂದ ನಾನು ಕಣ್ಣಿನ ಪರೀಕ್ಷೆ ಮಾಡಿಸಿರುತ್ತೇನೆ. ನಿಪಿ-7 ರಲ್ಲಿ ನನಗೆ ಎಲ್ಲಾ ಸರಿ ಇದೆ ಅಂತ ವೈದ್ಯರು ಅಭಿಪ್ರಾಯಪಟ್ಟಿರುತ್ತಾರೆ. ನಿಪಿ-7 ರಲ್ಲಿ OCT ಅಂತ ಬರೆದಿದೆ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ನನಗೆ ರವೀಂದ್ರನಾಥ ಮಾಲೀಕರು ಎಂಬುವವರು ಮರಿಯಪ್ಪ ವೈದ್ಯರ ಹತ್ತಿರ ಹೋಗುವುದು ಬೇಡ ಕೃಷ್ಣಮೂರ್ತಿ ವೈದ್ಯರ ಹತ್ತಿರನೇ ಹೋಗಬೇಕು ಅಂತ ಹೇಳಿದರು, ಅದರಂತೆ ನಾನು ಕೃಷ್ಣಮೂರ್ತಿ

ವೈದ್ಯರ ಹತ್ತಿರ ನಾನು ತಪಾಸಣೆ ಮಾಡಿಸಿದಾಗ ಅವರು ವರದಿಯಲ್ಲಿ OCT ಅಂತ ಬರೆದಿರುತ್ತಾರೆ. ಮರಿಯಪ್ಪ ವೈದ್ಯರ ಹತ್ತಿರ ನಾನು ತಪಾಸಣೆ ಮಾಡಿಸಿಕೊಂಡ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿದ್ದೇನೆ. OCT ಅಂದರೆ ಏನು ಅಂದರೆ ಸಾಕ್ಷಿದಾರರು ಹೇಳುತ್ತಾರೆ ನನ್ನ ನರ ಎಲ್ಲಾ ಟೆಸ್ಟ್ ಮಾಡಿ ಅದನ್ನು ಬರೆದರು. ನಾನು OCT Test ನ್ನು ದಾವಣಗೆರೆಯ Drusti Speciality Eye Hospital ನಲ್ಲಿ ಮಾಡಿಸಿದ್ದೇನೆ. ನಿಪಿ-7 ಆದ ಒಂದು ವರ್ಷದೊಳಗಡೆ ನಾನು Drusti Speciality Eye Hospital ನಲ್ಲಿ test ಮಾಡಿಸಿದ್ದೇನೆ. ಸಾಕ್ಷಿದಾರರು ಹೇಳುತ್ತಾರೆ ನ್ಯಾಯಾಲಯದಲ್ಲಿ ರಾಜಿ ಸಂಧಾನ ನಡೆಯುತ್ತಿರುವಾಗ Drusti Speciality Eye Hospital ನಲ್ಲಿ Test ಮಾಡಲು ಹೇಳಿರುವುದರಿಂದ ಮಾಡಿಸಿದ್ದೇನೆ. ಡಾ.ಮರಿಯಪ್ಪರವರ ಹತ್ತಿರ ನಾನು ಚಿಕಿತ್ಸೆ ಪಡೆದುಕೊಂಡಿದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಅಂದರೆ ಮರಿಯಪ್ಪರವರು ಮತ್ತು ಕೃಷ್ಣಮೂರ್ತಿಯವರು ಒಂದೇ ಕಡೆ ಕೆಲಸ ಮಾಡುತ್ತಿದ್ದರು, ಬೇರೆ ಬೇರೆ ದಾಖಲೆ ಇರುವುದಿಲ್ಲ. ಮರಿಯಪ್ಪರವರ ಹತ್ತಿರ ನಾನು ಚಿಕಿತ್ಸೆ ಪಡೆದುಕೊಂಡಿದ್ದು ನಿಪಿ-7 ರಲ್ಲಿ ನಮೂದು ಆಗಿದೆಯಾ ಅಂದರೆ ಅದರಲ್ಲಿ Date ನೋಡಬೇಕಾಗುತ್ತದೆ. ಸಾಕ್ಷಿದಾರರು ಹೇಳುತ್ತಾರೆ 2022 ರಲ್ಲಿ ಮರಿಯಪ್ಪ ವೈದ್ಯರ ಹತ್ತಿರ ನಾನು ಟೆಸ್ಟ್ ಮಾಡಿಸಿದ್ದೆ ಮತ್ತು ದಾಖಲೆಯನ್ನು ಮಾಲೀಕರಿಗೆ ಕೊಟ್ಟಿದ್ದೆ, ಆದರೆ ಮಾಲೀಕರು ಕೃಷ್ಣಮೂರ್ತಿಯವರ ಹತ್ತಿರ ಟೆಸ್ಟ್ ಮಾಡಿಸಿಕೊಂಡು ಬನ್ನಿ ಅಂತ ಕಳುಹಿಸಿದರು.

ಉಮಾಕಾಂತ ಕಣ್ಣಿನ ಚಿಕಿತ್ಸಾಲಯ ಕೃಷ್ಣಮೂರ್ತಿ ವೈದ್ಯರದ್ದು ಅಂದರೆ ನಿಜ. ನಿಪಿ-7 ಮತ್ತು 8 ದಾಖಲೆಗಳು ಸರಿ ಇರುತ್ತವೆ. ಅದರಲ್ಲಿ ಬರೆದ ವಿಷಯವನ್ನು ನಾನು ತಿಳಿದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಪಿ-8 ರಲ್ಲಿ Vision Grossly diminished ಅಂತ ಬರೆದಿದೆ ಅಂದರೆ ನಿಜ. ಅದರಲ್ಲಿ ನನಗೆ Retina Test ಮಾಡಿಸಿಕೊಂಡು ಬರಲು ಸಲಹೆ ನೀಡಿರುತ್ತಾರೆ. ಅದರೊಂದಿಗೆ OCT Test ಮಾಡಿಸಲು ಹೇಳಿದ್ದರು ಅಂದರೆ ನಿಜ. ಆದಾದ ನಂತರ ನಾನು Retina Test and Oct Test ನ್ನು ನ್ಯಾಯಾಲಯಕ್ಕೆ ಅರ್ಜಿ ಹಾಕುವ ಪೂರ್ವದಲ್ಲಿ ದೃಷ್ಟಿ ಆಸ್ಪತ್ರೆಯಲ್ಲಿ ಮಾಡಿಸಿದ್ದೇನೆ. ಕೆಲಸ ಮಾಡಲು

ಏನು ತೊಂದರೆ ಇಲ್ಲ ಅಂತ Letter head ದಾಖಲೆಯಲ್ಲಿ ಇರುವುದನ್ನು ಕೊಟ್ಟಿದ್ದೇನೆ. ನಾನು ದೃಷ್ಟಿ ಆಸ್ಪತ್ರೆಗೆ ಒಂದು ಸಲ ಹೋಗಿದ್ದೆ. ನಿಪಿ-20 ದಾಖಲೆ ಮಾತ್ರ ಹಾಜರುಪಡಿಸಿದ್ದೇನೆ ಅಂದರೆ ನಿಜ. ಅದರಲ್ಲಿ ಬರೆದ ವಿಷಯವನ್ನು ನಾನು ತಿಳಿದುಕೊಂಡು ಹಾಜರುಪಡಿಸಿದ್ದೇನೆ ಅಂದರೆ ನಿಜ. ನಿಪಿ-20ರ ದಾಖಲೆಯನ್ನು ಕೊಟ್ಟ ವೈದ್ಯರ ಹೆಸರು ರಾಜೇಶ ಅಂತ ಇರಬಹುದು. ನಿಪಿ-20ರ ದಾಖಲೆಯನ್ನು ನನಗೆ ವೈದ್ಯರು ಬರೆದುಕೊಟ್ಟರು ಅದನ್ನು ನಾನು ಮಾಲೀಕರಿಗೆ ಕೊಟ್ಟಿದ್ದೇನೆ.

ನಾನು Labour Office ಗೆ ಅರ್ಜಿ ಕೊಟ್ಟಿದಾಗಿನಿಂದ ಇವತ್ತಿನವರೆಗೂ ಕೇವಲ ಪತ್ರದ ಮೂಲಕ ಎದುರುದಾರರೊಂದಿಗೆ ವ್ಯವಹಾರ ಆಗಿರುತ್ತದೆ ಮುಖಾಮುಖಿ ಭೇಟಿಯಾಗಿರುವುದಿಲ್ಲ ಅಂದರೆ ಸುಳ್ಳು. ನನ್ನ ಪ್ರಕಾರ ಎರಡು ಸಲ ಫ್ಯಾಕ್ಟರಿಯಲ್ಲಿ ಎದುರುದಾರರಿಗೆ ಭೇಟಿಯಾಗಿದ್ದೇನೆ. ಒಂದು ಸಲ ನಾನು ಎದುರುದಾರರ ಮನೆಗೂ ಹೋಗಿದ್ದೇನೆ. ನನ್ನ ಮತ್ತು ಎದುರುದಾರರ ನಡುವೆ ಭಿನ್ನಾಭಿಪ್ರಾಯ ಬಂದ ನಂತರ ನಾನು ಮತ್ತು ಅವರು ಭೇಟಿಯಾಗುವ ಪ್ರಸಂಗ ಬಂದಿರುವುದಿಲ್ಲ ಅಂದರೆ ಸುಳ್ಳು. ಎರಡು ಸಲ ಫ್ಯಾಕ್ಟರಿಗೆ ಹೋಗಿ ಎದುರುದಾರರಿಗೆ ಭೇಟಿಯಾದ ವಿಷಯವನ್ನು ಮತ್ತು ಒಂದು ಸಲ ಎದುರುದಾರರ ಮನೆಗೆ ಹೋಗಿ ಭೇಟಿಯಾದ ವಿಷಯವನ್ನು ಅರ್ಜಿಯಲ್ಲಿ ಕಾಣಿಸಿಲ್ಲ.

ಈಗ ನನಗೆ ತೋರಿಸಿದ ನಿಪಿ-20ರ ದಾಖಲೆ ನನಗೆ ದಿಃ 13-09-2024ರಂದು ನೀಡಿದ್ದಾರೆ ಅಂತ ಬರೆದಿದೆ ಅಂದರೆ ನಿಜ. ನಿಪಿ-20ರ ದಾಖಲೆಯನ್ನು ಯಾರಿಗೂ ಅನ್ವಯಿಸಿ ಬರೆದಿಲ್ಲ ಅಂದರೆ ನಿಜ. ಮಾಲೀಕರು ನೀಡಿದ Letter Head ನ್ನು ನಾನು ವೈದ್ಯರಿಗೆ ತೋರಿಸಿದ್ದೆ ಆಮೇಲೆ ನಿಪಿ-20 ರ ದಾಖಲೆಯನ್ನು ಬರೆಯಲಾಗಿದೆ. ಮಾಲೀಕರು ಕೊಟ್ಟ Letter Head ದಾಖಲೆ ನಿಪಿ-10 ಇರುತ್ತದೆ. ನಿಪಿ-10ರಲ್ಲಿ ವೈಯಕ್ತಿಕವಾಗಿ ನನಗೆ ಕೊಡಲು ಬಂದಾಗ ನಾನು ನಿರಾಕರಿಸಿದ್ದರಿಂದ ಅಂಚೆಯ ಮೂಲಕ ಕಳುಹಿಸಿದ್ದು ಅಂದರೆ ನಿಜ. ನಿಪಿ-10 ದಾಖಲೆಯನ್ನು ದಿ 06-11-2019 ರಂದು ನೀಡಲಾಗಿದೆ ಅಂದರೆ ನಿಜ. ನಿಪಿ-10ರ ಬಗ್ಗೆ ನಿಪಿ-20ರಲ್ಲಿ ನಮೂದಾಗಿಲ್ಲ. ಸಾಕ್ಷಿದಾರರು ಸ್ವತಃ ಹೇಳುತ್ತಾರೆ ಅದಕ್ಕೂ ಪೂರ್ವದಲ್ಲಿ ನಾನು ಸರ್ಕಾರಿ ಆಸ್ಪತ್ರೆಯಿಂದ Certificate ತೆಗೆದುಕೊಂಡು ಹೋಗಿದ್ದೆ. ಆ Certificate

ನನ್ನ ಕಣ್ಣಿನ ದೃಷ್ಟಿ ಬಗ್ಗೆ ಇತ್ತು. ಆ Certificate ನಿಪಿ-9 ಇರುತ್ತದೆ. ನಿಪಿ-9 ರಲ್ಲಿ Physical Fitness Certificate ಇರುತ್ತದೆ ಅಂದರೆ ನಿಜ. ನಿಪಿ-9 ರಲ್ಲಿ ಕಣ್ಣಿನ ಬಗ್ಗೆ ತಪಾಸಣೆ ಮಾಡಿರುವುದಾಗಿ ಬರೆದಿಲ್ಲ ಅಂದರೆ ನಿಜ.

ನಿಪಿ-20 ರಲ್ಲಿ ನನಗೆ ದೃಷ್ಟಿ ಮಾಂಧ್ಯ ಮತ್ತು ಇರುಳುಗಣ್ಣು ಅಂತ ಬರೆದಿದೆ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಅದರ ಕೆಳಗಡೆ Attender ಕೆಲಸ ಮಾಡಬಹುದು ತೊಂದರೆ ಏನು ಇಲ್ಲ ಕಂಪ್ಯೂಟರ್ ಕೆಲಸ ಮಾಡಲು ಆಗುವುದಿಲ್ಲ ಅಂತ ಬರೆದಿದ್ದಾರೆ. ಒಂದು ಕಣ್ಣಿಗೆ 50% ಸಮಸ್ಯೆ ಇದ್ದು ಮಾತ್ರೆಗಳನ್ನು ತೆಗೆದುಕೊಂಡರೆ ಮುಂದೆ Recovery ಆಗುತ್ತದೆ ಅಂತ ಬರೆಯಲಾಗಿದೆ. ನಿಪಿ-20 ರಲ್ಲಿ ಬರೆದ ಅಂಶಗಳು ಸರಿ ಇವೆ. ನಿಪಿ-20 ರಲ್ಲಿ ಎರಡು ಕಣ್ಣಿಗೆ night blindness ಇದೆ ಅಂತ ಬರೆದಿದೆ ಅಂದರೆ ನಿಜ. ಮಾತ್ರೆಗಳನ್ನು ತೆಗೆದುಕೊಂಡರೆ ಮುಂದೆ Recovery ಆಗುತ್ತದೆ ಅಂತ ಬರೆದಿಲ್ಲ ಅಂದರೆ ಮಾತ್ರೆಗಳನ್ನು ತೆಗೆದುಕೊಳ್ಳಲು ಬರೆದಿರುತ್ತಾರೆ. ಈಗ ನನಗೆ ತೋರಿಸಿದ ನಿಪಿ-20 ರಲ್ಲಿ ಆ ರೀತಿ ಬರೆದಿಲ್ಲ Scanning report ನಲ್ಲಿ ಬರೆದಿದ್ದಾರೆ. ನಿಪಿ-20 ರ ದಾಖಲೆಯನ್ನು ನಾನು ಈ ಪ್ರಕರಣಕ್ಕೆ ಅನುಕೂಲವಾಗಲಿ ಅಂತ ಬರೆಸಿಕೊಂಡು ಬಂದಿದ್ದೇನೆ ಅಂದರೆ ಸರಿಯಲ್ಲ.

Attender ಕೆಲಸ ಅಂದರೆ Invoice ನ್ನು File ಗೆ ಜೋಡಿಸುವುದು, File ಎತ್ತಿ ಇಡುವುದು, Supervisor, Cashier, Manager and Owner ಯಾರನ್ನಾದರೂ ಕರೆದು ಬಾ ಅಂದರೆ ಅವರನ್ನು ಕರೆಯಲು ಹೋಗುತ್ತಿದ್ದೆ. ನಿಪಿ-2 ರಿಂದ 5 ರಲ್ಲಿ ಪ್ರತಿವಾದಿಯ ಹೆಸರು, ಸೀಲ್, ಸಹಿ ಇರುವುದಿಲ್ಲ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ನಿಪಿ-2 ಎದುರುದಾರರು ಸಂಬಳ ಕೊಟ್ಟಿರುವ ದಾಖಲೆ ಇರುತ್ತದೆ. ಸಾಕ್ಷಿದಾರರು ಹೇಳುತ್ತಾರೆ ನಿಪಿ-2 ರಲ್ಲಿ ಕಾಣಿಸಿರುವ ಸಂಬಳ Form-22 ರಲ್ಲಿ ಜಮಾ ಆಗುತ್ತಾ ಬಂದಿರುತ್ತದೆ. ನಿಪಿ-2 ರಿಂದ 5 ರ ದಾಖಲೆಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಿಪಿ-12 ರಿಂದ 14 ದೃಡೀಕೃತ ನಕಲು ಮಾಲೀಕರು ನನಗೆ ಕೊಟ್ಟಿದ್ದರು. ಮಾಲೀಕರು ದೃಡೀಕೃತ ನಕಲುಗಳನ್ನು ಕೊಟ್ಟಿರುವುದಾಗಿ ನಮೂದು ಇಲ್ಲ.

ನಾನು Attender ಆಗಿ ಕೆಲಸ ಮಾಡುತ್ತಿದ್ದಾಗ ಎದುರುದಾರರ ದಾಖಲೆಗಳ ಹಿಡಿತ ಇತ್ತು. ಎದುರುದಾರರು ನನ್ನ ಮೇಲೆ ಅವರ ದಾಖಲೆಗಳು ದುರುಪಯೋಗ ಆಗಿದೆ ಅಂತ ಎಷ್ಟು ಸಲ ದೂರು ಕೊಟ್ಟಿದ್ದಾರೆ ಅಂದರೆ ಒಂದು ಸಲ ದೂರು ಇತ್ತು, ಪೊಲೀಸರು ಕರೆದು ನನ್ನ ಜೊತೆ ಚರ್ಚೆ ಮಾಡಿದರು, ನನ್ನದೇನು ತಪ್ಪು ಇಲ್ಲ ಅಂತ ಹೇಳಿದ್ದೆ ಅದಕ್ಕೆ ಅವರು ಸುಮ್ಮನೆ ಆದರು. ಪುನಃ ಹೇಳುತ್ತೇನೆ ನನ್ನ ಮೇಲೆ ಏನು ದೂರು ಇರಲಿಲ್ಲ. ಎದುರುದಾರರು ದೂರು ಕೊಟ್ಟ ನಂತರ ಪೊಲೀಸರು ನನ್ನನ್ನು ಕರೆಸಿದ್ದರು ಅಂದರೆ ನಿಜ. ಆ ದೂರಿನಲ್ಲಿ ದಾಖಲೆಗಳು miss ಆಗಿದೆ ಅಂತ ಕೊಟ್ಟಿದ್ದರು. ಪೊಲೀಸರು ನನ್ನನ್ನು ಎರಡು ಸಾರಿ ಕರೆಸಿದ್ದರು, ವಿಚಾರಣೆ ಮಾಡಿದ ನಂತರ ನನ್ನದೇನು ತಪ್ಪೇನು ಇಲ್ಲ ಅಂತ ಕಳುಹಿಸಿದರು. ESI ಇದ್ದಲ್ಲಿ ಸಂಬಂಧಪಟ್ಟ Panel Board ವೈದ್ಯರಿಂದಲೇ ದಾಖಲೆಯನ್ನು ಕೊಡಬೇಕಾಗುತ್ತದೆ ಅಂದರೆ ನನಗೆ ಈ ವಿಷಯ ಗೊತ್ತಿಲ್ಲ.

(ಈ ಹಂತದಲ್ಲಿ ವಕೀಲರು ಸಮಯ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.